5	ಇಂಡಿಯನ್ ಹೋಟಲ್ಸ್ ಪ್ರೈವೇಟ್ ಲಿಮಿಟೆಡ್	ಹೋಟೆಲ್	0.90
6	ಫೇರ್‌ಮೌಂಟ್ ಹೋಟಲ್ಸ್ ಪ್ರೈವೇಟ್ ಲಿಮಿಟೆಡ್	ಬಿಸನಸ್ ಕ್ಲಾಸ್ 4 ಸ್ಟಾರ್ ಹೋಟೆಲ್	2.00
7	ಇನ್‌ಮಾರ್ ಟೂರಿಸಂ ಅಂಡ್ ಹೋಟಲ್ಸ್ ಪ್ರೈವೇಟ್ ಲಿಮಿಟೆಡ್	ಬಿಸನೆಸ್ ಕ್ಲಾಸ್ 3 ಸ್ಟಾರ್ ಹೋಟಲ್	3.00
8	ಆದರ್ಶ ರಿಯಾಲಿಟಿ ಅಂಡ್ ಹೋಟಲ್ಸ್ ಪ್ರೈವೇಟ್ ಲಿಮಿಟೆಡ್	ಬಿಸನೆಸ್ ಕ್ಲಾಸ್ ಹೋಟಲ್	1.70
9	ಶ್ರೀ ಕೃಷ್ಣ ಕೇಟರರ್ಸ್	ಹೋಟಲ್	0.125
10	ಬಾಲಾಜಿ ಕಾರ್ಪೊರೇಷನ್ ಸರ್ವಿಸಸ್	ಹೋಟಲ್ ಕಾಂಪ್ಲೆಕ್ಸ್	0.50
11	ಸಾಯಿಕೃಷ್ಣ ಎಂಟರ್‌ಪ್ರೈಸಸ್	ಸರ್ವಿಸ್ ಸ್ಟೇಷನ್	0.50
12	ಎನ್.ವಿ.ಟಿ. ಕ್ವಾಲಿಟಿ ಸರ್ಟಿಫಿಕೇಷನ್ ಪ್ರೈವೇಟ್ ಲಿಮಿಟೆಡ್	ಟ್ರೈನಿಂಗ್ ಸೆಂಟರ್	0.33
13	ಸತ್ಯ ಸಾಯಿ ಟೂರಿಸ್ಟ್(ರಿ)	ಪಾರ್ಕಿಂಗ್ ಸೌಲಭ್ಯಕ್ಕಾಗಿ	0.40
14	ಚಾಲುಕ್ಯ ರೆಸಾರ್ಟ್ಸ್	ಹೋಟೆಲ್‌ಗಾಗಿ	20.00
15	ಗೋಪಾಲನ್ ಎಂಟರ್ ಪ್ರೈಸಸ್	S.T.P. ಗಾಗಿ	15.23

4)3(1093) : ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) : ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡುಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕಿನಲ್ಲಿ ವಕ್ಫ್ ಬೋರ್ಡಿಗೆ ಸಂಬಂಧಿಸಿದ ಆಸ್ತಿಗಳು ಎಷ್ಟು :

ಆ) ಈ ಆಸ್ತಿಗಳಲ್ಲಿ ಕೆಲವರು ಅತಿಕ್ರಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಇ) ಬಂದಿದ್ದಲ್ಲಿ, ಸರ್ಕಾರ ಅತಿಕ್ರಮಣದ ವಿರುದ್ಧ ಕೈಗೊಳ್ಳುವ ಕ್ರಮಗಳೇನು :

ಈ) ಈ ಅತಿಕ್ರಮಣ ಆಸ್ತಿಯ ಮೌಲ್ಯವೆಷ್ಟು: ಇದನ್ನು ಅತಿಕ್ರಮಿಸಿಕೊಂಡಿರುವವರು ಯಾರು, ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು (ವಿವರ ಒದಗಿಸಿರಿ) ?

ಶ್ರೀ ಮಿರಾಜದ್ದೀನ್ ಎನ್ ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು)

ಅ) ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ನೋಂದಾಯಿಸಲಾಗಿರುವ ವಕ್ಫ್ ಆಸ್ತಿಗಳ ಸಂಖ್ಯೆ: 138

ಆ) ಬಂದಿದೆ

ಇ) ರಾಜ್ಯದಲ್ಲಿರುವ ಎಲ್ಲಾ ವಕ್ಫ್ ಆಸ್ತಿಗಳು ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧೀನದಲ್ಲಿರುತ್ತೆ. ವಕ್ಫ್ ಮಂಡಳಿಯು ಒಂದು ಶಾಸನಬದ್ಧ ಪ್ರಾಧಿಕಾರವಾಗಿದ್ದು, ಇಂತಹ ಪರಿಸ್ಥಿತಿಗಳನ್ನು ಪ್ರಾಧಿಕಾರವಾಗಿದ್ದು, ಇಂತಹ ಪರಿಸ್ಥಿತಿಗಳನ್ನು ಎದುರಿಸಲು ವಕ್ಫ್ ಅಧಿನಿಯಮ 1995ರ ಕಲಂ 54 ರಲ್ಲಿ ಸಾಕಷ್ಟು ಅಧಿಕಾರ ಅವರಿಗೆ ಇರುತ್ತೆ.

ಈ) ಈ ಆಸ್ತಿಯ ಅಂದಾಜು ಮೌಲ್ಯ 4.00 ಲಕ್ಷ ರೂ. ಆಗಿರಬಹುದು. ಇದನ್ನು ಬಿಸ್ಮಿಲ್ಲಾಷಾವಲಿ ಮೆಕಾನ್‌ನಲ್ಲಿ ವಾಸಿಸುತ್ತಿರುವ ಎಂಟು ವ್ಯಕ್ತಿಗಳು ಅತಿಕ್ರಮಿಸಿರುತ್ತಾರೆ. ಹಾಗೂ ರಾಜ್ಯ ವಕ್ಫ್ ಮಂಡಳಿ ಇವರಿಗೆ ಈಗಾಗಲೇ ನೋಟೀಸ್‌ಗಳನ್ನು ಜಾರಿ ಮಾಡಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಈವರೆವಿಗೂ ಸರ್ಕಾರ ಯಾವುದೇ ಕ್ರಮ ಜರುಗಿಸಿರುವುದಿಲ್ಲ.

414(1094) : ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಭಾರಿ, ಮದ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಹಾಗೂ ಪುನರುಜ್ಜೀವನಕ್ಕಾಗಿ ಸರ್ಕಾರವು ವಿಶೇಷವಾಗಿ ಹಮ್ಮಿಕೊಂಡಿರುವ ಕಾರ್ಯ ಯೋಜನೆಗಳ್ಯಾವುವು :

ಆ) ವಿರಾಜಪೇಟೆಯಲ್ಲಿ ಕೈಗಾರಿಕೆಗಳ ಸಂಖ್ಯೆ ಎಷ್ಟು? ಇಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಿಲ್ಲವೇ: ಯಾವ ಕಾರ್ಯಕ್ರಮ ಹಾಕಿಕೊಂಡಿದೆ.

ಇ) ಇದನ್ನು ಯಾವಾಗ ಅನುಷ್ಟಾನಗೊಳಿಸಲಾಗುವುದು; ಈ ಭಾಗದಲ್ಲಿ ಕೈಗಾರಿಕೆಗಳು ಇಲ್ಲದಿರುವುದನ್ನು ಸರ್ಕಾರ ಗಮನಿಸಿದೆಯೇ: ಹಾಗಿದ್ದಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳುವುದು :

ಈ) ಕೈಗಾರಿಕೆಗಳ ಸ್ಥಾಪನೆ ಹಾಗೂ ಉತ್ತೇಜನಕ್ಕಾಗಿ ಹಮ್ಮಿಕೊಳ್ಳಲಾಗಿರುವ ಕಾರ್ಯಯೋಜನೆ ಏನು ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಸಚಿವರು)

ಅ) 2001–2006ನೇ ಸಾಲಿನ ನೂತನ ಕೈಗಾರಿಕಾ ನೀತಿಯನ್ವಯ ಕೊಡಗು ಜಿಲ್ಲೆಯನ್ನು ಕೈಗಾರಿಕೆಯಲ್ಲಿ ಹಿಂದುಳಿದ 'ಸಿ' ವಲಯದಲ್ಲಿ ವರ್ಗೀಕರಿಸಲಾಗಿದೆ ಈ ವಲಯದಲ್ಲಿ ಹೊಸದಾಗಿ ಕೈಗಾರಿಕಾ ಘಟಕಗಳನ್ನು ಸ್ಥಾಪಿಸುವ ಉದ್ಯಮದಾರರಿಗೆ ಈ ಕೆಳಕಂಡ ರಿಯಾಯಿತಿಗಳನ್ನು ನೀಡಲಾಗುತ್ತಿದೆ.

1. ಅತಿ ಸಣ್ಣ ಕೈಗಾರಿಕೆಗಳಿಗೆ ಸ್ಥಿರ ಬಂಡವಾಳದ ಮೇಲೆ ಶೇ. 20ರಷ್ಟು ಸಹಾಯಧನ (ಗರಿಷ್ಠ ಮಿತಿ ರೂ. 10.00 ಲಕ್ಷ)

2. ಕೈಗಾರಿಕೆಯನ್ನು ಸ್ಥಾಪಿಸಲು ಖರೀದಿಸುವ ಯಂತ್ರೋಪಕರಣದ ಮೇಲೆ ಪ್ರಥಮ ಮೂರು ವರ್ಷಗಳ ಕಾಲ ಪ್ರವೇಶ ತೆರಿಗೆ ವಿನಾಯಿತಿ ಹಾಗೂ ಕಚ್ಚಾ ಸಾಮಗ್ರಿ ಖರೀದಿ ಮೇಲೆ ಪ್ರವೇಶ ತೆರಿಗೆ 5 ವರ್ಷಗಳ ಕಾಲ ವಿನಾಯಿತಿ.